## "ವರ್ಟಿಗೋ (ತಲೆಸುತ್ತುವಿಕೆ) – ಗೆ ಸುಲಭ ಪರಿಹಾರಗಳು"

## ವೈದ್ಯಕೀಯ ಸಮಾವೇಶ ಹಾಗೂ ಕಾರ್ಯಾಗಾರ

ಯೆನೆಪೋಯ ವೈದ್ಯಕೀಯ ಮಹಾವಿದ್ಯಾಲಯದ ಕಿವಿ, ಮೂಗು, ಗಂಟಲು ಶಸ್ತ್ರ ಚಿಕಿತ್ಸಾ ವಿಭಾಗವು ವರ್ಟಿಗೋ(ತಲೆಸುತ್ತುವಿಕೆ) ಗೆ ಕಾರಣಗಳನ್ನು ಪತ್ತೆಹಚ್ಚಲು ಆಧುನಿಕ ಉಪಕರಣಗಳ ಸೌಲಭ್ಯಗಳನ್ನು ಹೊಂದಿದೆ. ಇದೇ ನಿಟ್ಟಿನಲ್ಲಿ ಮಂಗಳೂರಿನ ವೈದ್ಯರಿಗೆ ವರ್ಟಿಗೋ ಬಗ್ಗೆ ಹೆಚ್ಚಿನ ಮಾಹಿತಿ ಹಾಗೂ ಆಧುನಿಕ ಉಪಕರಣಗಳನ್ನು ಉಪಯೋಗಿಸಲು ತರಭೇತಿ ನೀಡುವ ಉದ್ದೇಶದಿಂದ ನವೆಂಬರ್ 28 ಹಾಗೂ29 2015 ರಂದು "ವರ್ಟಿಗೋ (ತಲೆಸುತ್ತುವಿಕೆ) ಗೆ ಸುಲಭ ಪರಿಹಾರಗಳು" ಎಂಬ ವೈದ್ಯಕೀಯ ಸಮಾವೇಶ ಹಾಗೂ ಕಾರ್ಯಾಗಾರವನ್ನು ಯೆನೆಪೋಯ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು.

ಯೆನೆಪೋಯ ವಿಶ್ವವಿದ್ಯಾನಿಲಯದ ನಿರ್ದೇಶಕರಾದ ಶ್ರೀ.ಫರ್ಹಾದ್ ಯೆನೆಪೋಯ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಾಗಾರವನ್ನು ನವೆಂಬರ್ 28 ರಂದು ಉದ್ಘಾಟಿಸಿದರು. ವಿಭಾಗದ ಮುಖ್ಯಸ್ಥರಾದ ಡಾ.ಗಂಗಾಧರ್ ಸೋಮಯಾಜಿ ಸ್ವಾಗತಿಸಿದರು. ವಿಶ್ವವಿದ್ಯಾನಿಲಯದ ಉಪಕುಲಪತಿ ಡಾ.ಎಮ್.ವಿಜಯಕುಮಾರ್‌ರವರ ಅಧ್ಯಕ್ಷತೆಯಲ್ಲಿ ಉದ್ಘಾಟನಾ ಸಮಾರಭವು ನೆರವೇರಿತು. ಡಾ.ವಿಜಯಲಕ್ಷ್ಮಿ ಎಸ್ ವಂದಿಸಿದರು. ಕುಲಸಚಿವರಾದ ಡಾ.ಸಿ.ವಿ.ರಘುವೀರ್, ಪ್ರಾಂಶುಪಾಲರಾದ ಡಾ.ಗುಲಾಮ್ ಜೀಲಾನಿ ಖಾದಿರಿ, ಸಲಹೆಗಾರರಾದ ಡಾ.ಅಬ್ದುಲ್ ರೆಹಮಾನ್ ಹಾಗೂ ಕಾರ್ಯದರ್ಶಿಗಳಾದ ಡಾ.ಎಸ್.ಎ,ಮೊಹಮ್ಮದ್ ಉಪಸ್ಥಿತರಿದ್ದರು. ಬೆಂಗಳೂರಿನ ಡಾ.ಡಿ.ಆರ್.ಶ್ರೀನಿವಾಸ್, ಡಾ.ನವೀನ್.ಕೆ, ಡಾ.ಡಿ.ಆರ್.ಸೂರ್ಯ ಪ್ರಕಾಶ್ ಹಾಗೂ ಆಲಪ್ಪಿಯ ಡಾ.ಎಮ್.ವಿ.ಫ್ರಾನ್ಸಿಸ್ ಉಪನ್ಯಾಸಗಳನ್ನು ಹಾಗೂ ನಿದರ್ಶನಗಳನ್ನು ನೀಡಿದರು. ಕರ್ನಾಟಕ ಹಾಗೂ ಕೇರಳದ ಸುಮಾರು 150 ವೈದ್ಯರು ಈ ಸಮಾವೇಶದಲ್ಲಿ ಭಾಗವಹಿಸಿ ತರಭೇತಿಯನ್ನು ಪಡೆದು ಕೊಂಡರು.

ಯೆನೆಪೋಯ ವೈದ್ಯಕೀಯ ಮಹಾವಿದ್ಯಾಲಯವು ವರ್ಟಿಗೋ (ತಲೆಸುತ್ತುವಿಕೆ) ಯನ್ನು ಪತ್ತೆ ಹಚ್ಚಲು ಇತ್ತೀಚೆಗೆ ಪಡೆದು ಕೊಂಡಿರುವ ವಿಡಿಯೋ ನಿಸ್ಟಾಗ್ಮೋಗ್ರಾಫಿ ಆಧುನಿಕ ಮುಂತಾದ ಉಪಕರಣಗಳ ಸೌಲಭ್ಯವನ್ನು ವರ್ಟಿಗೋದಿಂದ ಪೀಡಿತ ರೋಗಿಗಳು ಉಪಯೋಗಿಸಿಕೊಳ್ಳಬಹುದು. ಈ ಕಾರ್ಯಾಗಾರದಲ್ಲಿ ಕರ್ನಾಟಕ ವೈದ್ಯಕೀಯ ಮಂಡಳಿಯಿಂದ ಪರಿವೀಕ್ಷಕರಾಗಿ ಡಾ.ವಾಧಿಶ್ ಭಟ್ ರವರು ಉಪಸ್ಥಿತರಿದ್ದರು.

## VERTIGO SIMPLIFIED- CME AND WORKSHOP

The Department of ENT & Head & Neck Surgery, Yenepoya Medical College, Mangalore conducted a two days CME and Workshop- VERTIGO SIMPLIFIED on 28th and 29th November, 2015 at the Indoor Auditorium, of the Academic Block. The program was inaugurated on 28 Nov, 2015. Dr. Gangadhara Somayaji, Organizing chairperson and Head of Department of ENT welcomed the gathering. Mr. Farhaad Yenepoya, Director (Finance), Yenepoya University and chief guest in his address stressed on the need and importance of such CMEs, workshops and updates. Dr. M. Vijayakumar, Hon'ble Vice-Chancellor of Yenepoya University presided over the function. Dr. Vijayalakshmi S, Associate Professor in ENT proposed the vote of thanks. Dr. C. V. Raghuveer, Registrar, Yenepoya University, Dr. Ghulam Jeelani Qadiri, Dean of Yenepoya Medical College, Dr. Abdur Rehman, Advisor and Dr. N.A. Mohammed Mohammed, Organizing Secretary were present. Over 150 participants from Karnataka and Kerala participated in this workshop. Dr. D.R. Srinivas, Dr. Naveen K, Dr. Suryaprakash D.R. from Bangalore and Dr. M.V. Francis from Alleppey were the invited faculty for the program. The program included lectures and video demonstrations and Hands-on training in various laboratory manoeuvres used for the diagnosis and management of vertigo including Videonystagmography(VNG). Department of ENT, Yenepoya Medical College is now well- equipped with facilities for VNG and hence patients with vertigo can be evaluated using the latest tools and treated appropriately. Dr. Vadeesh Bhat was present as an Observer from Karnataka Medical Council.


UNIVERSITY
COLLEGE